ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-6 Issue 3, November-December 2024, Pp.35-40**
**©*IIMRD*, Mysuru**

IIMRD JOURNALS

**www.iimrd.com**

# ಜಿ.ಆರ್. ತಿಪ್ಪೇಸ್ವಾಮಿ ಅವರ ಕೋಲಶಾಂತಯ್ಯ: ವಿಮರ್ಶಾ ಒಳನೋಟಗಳು

**ಡಾ. ಜಗನ್ನಾಥ ಪುಲ್ಲಾನೋರ್**
ಕನ್ನಡ ಅತಿಥಿ ಉಪನ್ಯಾಸಕರು, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

**ಸಾರಾಂಶ: (Abstract)**

*ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಾಪಕರಾಗಿದ್ದ ಜಿ.ಆರ್. ತಿಪ್ಪೇಸ್ವಾಮಿ ಅವರು ಜಿ.ಆರ್.ಟಿ ಎಂದೇ ವಿದ್ಯಾರ್ಥಿಗಳಲ್ಲಿ ಪರಿಚಿತರಾಗಿದ್ದರು. ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ಗುಜ್ಜನಾಡು ಗ್ರಾಮದವರಾದ ಅವರು ಬಂಗಾರಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸಿದ್ದರು. 1994ರಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ರೀಡರ್ ಆಗಿ ಸೇರಿ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದರು. ಪ್ರಸ್ತಾಪ, ಪ್ರಣೀತ,ಅಭಿಮುಖ (ವಿಮರ್ಶಾ ಕೃತಿಗಳು), ಬಂದೀರೆ ನನ್ನ ಜಡೆವೊಳಗೆ, ಕೋಲಾರಮ್ಮ, ದಾಸ ಸಾಹಿತ್ಯ ಮತ್ತು ಜಾನಪದ (ಜಾನಪದ ಕೃತಿಗಳು), ಕನ್ನಡ ನಾಡಿನ ಕಲಾವಿದರು, ಬಾಲಣ್ಣ–ಭಾಗವತರು, ಜೀವನ ಕಥೆ, ಪ್ರಶಸ್ತಿ ಪಡೆದ ಮಹನೀಯರು (ವ್ಯಕ್ತಿಚಿತ್ರಗಳು), ಜಿ.ವೆಂಕಟಯ್ಯ (ಸಾಹಿತ್ಯ ವಾಚಿಕೆ), ಅಗ್ನಿಸಾಕ್ಷಿ, ಕಮಲಾ ಕೃತಿ ವಿಮರ್ಶೆ, ಕುಮಾರವ್ಯಾಸ (ವಿರಹಿಗಳ ಶೃಂಗಾರ), ಮೂಡಲ ವೈಭವ (ಲೇಖನಗಳ ಸಂಕಲನ), ಹೊಂಗಿರಣ, ಸಿರಿನಂದಿ (ಸ್ಮರಣ ಸಂಚಿಕೆ) (ಸಂಪಾದಿತ ಕೃತಿಗಳು) ಪ್ರಸ್ತುತ ಲೇಖನದಲ್ಲಿ ಮೈಸೂರು ವಿವಿ ಪ್ರಕಟಿಸಿರುವ ಕೋಲಶಾಂತಯ್ಯ ಕೃತಿಯನ್ನು ಕುರಿತು ಚರ್ಚಿಸಲಾಗಿದೆ.*

**ಮುಖ್ಯಪದಗಳು (Keywords):** ಕನ್ನಡ ಸಾಹಿತ್ಯ, ಜಿ.ಆರ್. ತಿಪ್ಪೇಸ್ವಾಮಿ, ಕೋಲಶಾಂತಯ್ಯ, ವಿಮರ್ಶಾ ಒಳನೋಟಗಳು.

**ಪೀಠಿಕೆ**

ಬರದ ನಾಡೆಂದೇ ಗುರುತಿಸಿಕೊಂಡ ಜಿ.ಆರ್.ತಿಪ್ಪೇಸ್ವಾಮಿ ಅವರು ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನಲ್ಲಿ ಹುಟ್ಟಿದವರಾದರೂ ತಮ್ಮ ಪರಿಶ್ರಮದಿಂದ ಇಂದು ಬರಹದ ಬದುಕಿನಲ್ಲಿ ಅವರು ವಿಮರ್ಶಕರಾಗಿ ಗುರುತಿಸಿಕೊಂಡರೂ, ಜಾನಪದ ಕ್ಷೇತ್ರದಲ್ಲಿ ಅವರ ಸಾಧನೆ ಅದ್ವಿತೀಯವಾದುದು. ಜೊತೆಗೆ ವ್ಯಕ್ತಿ ಚಿತ್ರಣ, ಸಂಪಾದನೆಯ ಕ್ಷೇತ್ರಗಳಲ್ಲೂ ಗಮನಾರ್ಹ ಸಾಧನೆಗೈದಿದ್ದಾರೆ. ಜಾನಪದ ವಿಶ್ವಕೋಶಗಳ ರಚನೆಯಲ್ಲೂ ಅವರದು ಗಣನೀಯ ಪಾತ್ರವಿದೆ. ಇಂತಹ ಸಾಧನೆಗಳ ನಡುವೆಯೂ ಸದ್ದಿರದೆ, ಪ್ರಚಾರದ ಗೀಳಿಗೆ ಬೀಳದೆ, ಸರಳ ಸಜ್ಜನಿಕೆಯ ವ್ಯಕ್ತಿಯಾಗಿ ಉಳಿದುಬಿಡುವುದು ಎಲ್ಲರಿಗೂ ಆಗದು. ಅರ್ಧಶತಕಕ್ಕೂ

*Please cite this article as:* ಜಗನ್ನಾಥ ಪುಲ್ಲಾನೋರ್. (2024). ಜಿ.ಆರ್. ತಿಪ್ಪೇಸ್ವಾಮಿ ಅವರ ಕೋಲಶಾಂತಯ್ಯ: ವಿಮರ್ಶಾ ಒಳನೋಟಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(3). ಪು.ಸಂ.* 35–40

ಮೀರಿದ ಕೃತಿಗಳ ಕರ್ತೃ. ಆದರೂ ಯಾವುದೇ ಹಮ್ಮು ಬಿಮ್ಮುಗಳಿಲ್ಲ. ಪ್ರಶಸ್ತಿ–ಪುರಸ್ಕಾರಗಳ ಹಿಂದೆ ಬಿದ್ದವರಲ್ಲ. ಹಂತ ಹಂತವಾಗಿ ಬೆಳೆದು ಜೀವನದ ಎಲ್ಲ ಸ್ತರಗಳ ಸತ್ವವನ್ನು ಮೀರಿ ಸದೃಢಗೊಂಡವರು. ಇವರ ಸಾಹಿತ್ಯ ಬರಹಗಳಲ್ಲಿ ಸೃಜನಸಾಹಿತ್ಯ, ವಿಮರ್ಶೆ, ಸಂಶೋಧನೆ ಹೀಗೆ ಅನೇಕ ಬರಹಗಳ ಮೂಲಕ ಪ್ರಸಿದ್ದಿಯನ್ನು ಪಡೆದವರಾಗಿದ್ದಾರೆ.

***"ಪಂಚವಳಿಯ ವಿಸ್ತೀರ್ಣದಲ್ಲಿ ಕಟ್ಟಿದವು ಮೂರು ಪಟ್ಟಣ***

***ಕೆಲದಲ್ಲಿ ಹೊಲಗೇರಿ, ಬಲದಲ್ಲಿ ಮಾದಿಗರ ಮನೆ***

***ನಡುವೆ ಹೆಬ್ಬಾರುವರ ಮಹಾಜನಂಗಳ ಗೂಡಿವಾಡ***

***ಹೊಲೆಯರ ಗೋವಧೆಯ ಮಾದಿಗರ ಮನೆಯ ನಾತ***

***ಹಾರುವರೂಟದ ಸುಖ ಲೇಸಾಯ್ತು***

***ಜಗದ ಕೀಳುಮೇಲಿನ ಕೂಟ***

***ಅದೇತರಿಂದಾಯಿತ್ತು ಎಂಬುದು ನಿನ್ನ ನೀನರಿ***

***ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ"***

ವಚನ ಸಾಹಿತ್ಯದ ಅದೆಷ್ಟೋ ಧ್ವನಿಗಳನ್ನು ಇಂದಿಗೂ ನಿರ್ಲಕ್ಷಿಸಲಾಗುತ್ತಿದೆ. ಇಂತಹ ನಿರ್ಲಕ್ಷಿತ ನೆಲೆಯಲ್ಲಿರುವ ವಚನಕಾರರನ್ನು ಅಲಕ್ಷಿತ ವಚನಕಾರರೆಂದು ಕರೆಯಬಹುದು. ಇವರ ವಚನಗಳನ್ನು ಕುರಿತು ಸಂಗ್ರಹ ಕಾರ ನಡೆದಿದೆ. ಜೊತೆಗೆ ಅಲ್ಲಲ್ಲಿ ಉಲ್ಲೇಖಗಳೂ, ಪ್ರತ್ಯೇಕ ಚರ್ಚಿತ ಗೊಂಡ ಪುಸ್ತಕಗಳೂ ಹೊರಬಂದಿವೆ. ಆದರೂ ನಿರೀಕ್ಷಿತ ಪ್ರಮಾಣದಲ್ಲಿ ಇವರ ವಚನಗಳನ್ನು ಕುರಿತು ಚರ್ಚೆಗಳು ಸಾಗಿಲ್ಲ. ಚರ್ಚಿಸಿದಷ್ಟೇ ವಿಷಯಗಳಲ್ಲಿ ಇವರ ವಚನದ ತಾತ್ವಿಕತೆ ಮತ್ತು ವಚನ ಸಾಹಿತ್ಯಕ್ಕೆ ಇವರು ಕೊಟ್ಟ ಅದ್ಭುತ ಕೊಡುಗೆಯು ಮನದಟ್ಟಾಗುತ್ತದೆ. ಇಂತಹ ಕೊಡುಗೆ ಯನ್ನು ಮಾಡಿಕೊಡುವ ನಿಟ್ಟಿನಲ್ಲಿ ಡಾ. ಜಿ.ಆರ್. ತಿಪ್ಪೇಸ್ವಾಮಿ ಅವರ 'ಕೋಲ ಶಾಂತಯ್ಯ' ಪುಸ್ತಕವೂ ಒಂದು. ಪ್ರೊ, ಬರಗೂರು ರಾಮಚಂದ್ರಪ್ಪ ಅವರ ಪ್ರಧಾನ ಸಂಪಾದಕತ್ವದಲ್ಲಿ ಮೈಸೂರಿನ ಬಸವ ಅಧ್ಯಯನ ಪೀಠವು ವಚನ ಚಿಂತನ ಮಾಲೆಯನ್ನು ಹೊರತಂದಿತು. ಈ ಮಾಲೆಯಲ್ಲಿ ಸುಮಾರು 31 ಪುಸ್ತಕಗಳು ವಚನಕಾರರನ್ನು, ಅವರ ಹಿನ್ನೆಲೆಯನ್ನು, ವಚನಗಳ ವಿಶ್ಲೇಷಣೆಯನ್ನು ಹಿಡಿದಿಟ್ಟ ಪ್ರಮುಖ ಕೃತಿಗಳಾಗಿ ಹೊರಬಂದವು. ಇಂತಹ ಕೃತಿಗಳಲ್ಲಿ ಜಿ.ಆರ್. ತಿಪ್ಪೇಸ್ವಾಮಿ ಅವರ 'ಕೋಲ ಶಾಂತಯ್ಯ' ಬಹು ಮುಖ್ಯ ಕೃತಿ, ಇದು ಕೋಲಶಾಂತಯ್ಯನ ಜೀವನ ವಿವರ, ಅವನ ವಚನಗಳ ವೈಶಿಷ್ಟತೆಯನ್ನು ಅತ್ಯಂತ ಸಮಗ್ರವಾಗಿ ಹಿಡಿದಿಟ್ಟಿದೆ.

ಬರಗೂರರು ಈ ಪುಸ್ತಕ ಮುನ್ನುಡಿಯಲ್ಲಿ ವಚನ ಚಳವಳಿಯನ್ನು ಕುರಿತು "ಬಸವಣ್ಣ ನವರ ನಾಯಕತ್ವದಲ್ಲಿ ಸಂಘಟಿತವಾದ ವಚನ ಚಳವಳಿಯು ನಮ್ಮ ನೆಲದ ಒಂದು ಚಾರಿತ್ರಿಕ ಸಂಭವ. ಅದು

ಜಾತಿ ಕಟ್ಟಳೆಗಳನ್ನು ಕಳಚಿದ ಧಾರ್ಮಿಕ ಆಂದೋಲನವೂ ಹೌದು, ಸೃಜನಶೀಲ ಸಾಹಿತ್ಯ ಸಂಚಲ ನವೂ ಹೌದು." ಎಂದು ಬರೆಯುವುದರ ಮೂಲಕ ಈ ಪುಸ್ತಕಕ್ಕೊಂದು ಉತ್ತಮ ಆರಂಭ ವನ್ನು ಒದಗಿಸಿ ಕೊಟ್ಟಿದ್ದಾರೆ. ಜೊತೆಗೆ 'ವಚನ ಚಳವಳಿಯ ಪ್ರಜಾಸತ್ತಾತ್ಮಕ ಮೌಲ್ಯಕ್ಕೆ ಮರ್ಯಾದೆ ತರುವ ಕೆಲಸವೆಂದು ಭಾವಿಸಿ ಈ ಪುಸ್ತಕ ಮಾಲೆಯನ್ನು ಸಾಕಾರಗೊಳಿಸ ಲಾಗಿದೆ' ಎಂದಿದ್ದಾರೆ. ಈ ಹಿನ್ನೆಲೆ ಯಲ್ಲಿ ಪ್ರಜಾಪ್ರಭುತ್ವ ನೆಲೆಗಟ್ಟಿನಲ್ಲಿ ನಿಂತ ಕೋಲಶಾಂತಯ್ಯನು ರೂಪಿಸ ಲೆತ್ನಿಸಿದ ಪರಾಯ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ನೆಲೆಗಳ ಹುಡುಕಾಟ ವನ್ನು ತಿಪ್ಪೇ ಸ್ವಾಮಿಯವರು ಈ ಕೃತಿಯ ಮೂಲಕ ಅತ್ಯುತ್ತಮವಾಗಿ ಕಟ್ಟಿಕೊಟ್ಟಿದ್ದಾರೆ.

ಈ ಕೃತಿಯಲ್ಲಿ ಲೇಖಕರು ಕೋಲಶಾಂತಯ್ಯನ ವಚನಗಳ ಸಂಗ್ರಹಕ್ಕಷ್ಟೆ ಸೀಮಿತಗೊಳಿಸದೆ ಅವುಗಳ ವಿಶ್ಲೇಷಣೆಯನ್ನು ಇಲ್ಲಿ ನಡೆಸಿದ್ದಾರೆ. ಇದು ಬಹಳ ಮುಖ್ಯ, ಚನ್ನಬಸವಣ್ಣ, ಮಡಿವಾಳ ಮಾಚಯ್ಯ, ಅಮ್ಮಿಗೆ ದೇವ, ಮರುಳಶಂಕರದೇವ ಮತ್ತು ಅಕ್ಕಮಹಾದೇವಿಯಂತವರು ಸ್ಮರಿಸಿ ಕೊಂಡಿರುವ ಕೋಲಶಾಂತಯ್ಯ 12ನೇ ಶತಮಾನದ ಪ್ರಮುಖ ವಚನಕಾರರಲ್ಲಿ ಒಬ್ಬ 'ಪುಣ್ಯಾ ರಣ್ಯದ ಹನ ಭೀಮೇಶ್ವರಲಿಂಗ ನಿರಂಗಸಂಗ' ಈತನ ವಚನಗಳ ಅಂಕಿತ. ಇವನ ಒಂದುನೂರ ಮೂರು ವಚನಗಳು ದೊರಕಿವೆ. ಈ ಎಲ್ಲ ವಚನಗಳಲ್ಲಿ ಅವನ ಅನುಭವದ ಮಹಾಪರ್ವತವೇ ಹರಿದು ಅಕ್ಷರಗಳಾದಂತೆ ಭಾಸವಾಗುತ್ತದೆ. ಇದು ಕೋಲಶಾಂತಯ್ಯನ ವಚನ ರಚನೆಯ ಉದ್ದೇಶಕ್ಕೆ ಕನ್ನಡಿ ಹಿಡಿದಂತಾಗಿದೆ.

ಕೋಲಶಾಂತಯ್ಯನ ಜೀವನ ಚರಿತ್ರೆಯಿಂದ ತಿಳಿದುಬಂದಂತೆ 'ಬಸವಣ್ಣನಲ್ಲಿ ಕಟ್ಟಿಗೆವಿಡಿದು ಮೌಲದಾರ ನಿಯೋಗವನ್ನು ನಡೆಸುವ ವೃತ್ತಿಯನ್ನು ಮಾಡುತ್ತಿದ್ದವನು. ಇವನ ಬಗ್ಗೆ ಕ್ರಿ.ಶ. 1550ರ ನಂಜುಂಡ ಕವಿ ತನ್ನ ಭೈರವೇಶ್ವರ ಕಾವ್ಯದಲ್ಲಿ, ಕ್ರಿ.ಶ. 1585 ರ ವಿರೂಪಾಕ್ಷ ಪಂಡಿತ ತನ್ನ ಚನ್ನಬಸವಪುರಾಣದಲ್ಲಿ ದಾಖಲಿಸಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ಸಿದ್ಧಯ್ಯ ಪುರಾಣಿಕರು ತಮ್ಮ ಶರಣ ಚರಿತಾಮೃತದಲ್ಲಿ ಮತ್ತು ಬಾಹೂರ ಬ್ರಹ್ಮಯ್ಯನು ತನ್ನ ಒಂದು ವಚನ ದಲ್ಲಿ ಕೋಲ ಶಾಂತಯ್ಯನ ಬಗ್ಗೆ ಪ್ರಸ್ತಾಪಿಸಿರುವುದನ್ನು ಕಾಣಬಹುದಾಗಿದೆ. ಇಷ್ಟೆಲ್ಲ ಚರಿತ್ರೆಯನ್ನು ಲೇಖಕರು ಒಂದು ಸಂಶೋಧನಾತ್ಮಕ ನೆಲೆಯಲ್ಲಿ ಈ ಕೃತಿಯ ಮೂಲಕ ಕಟ್ಟಿಕೊಟ್ಟಿದ್ದಾರೆ. ಇಷ್ಟೆಲ್ಲ ಆಧಾರ ಇದ್ದರೂ ಇವನ ವಚನಗಳು ಚರ್ಚೆಯಾಗದೆ ಅಲಕ್ಷ್ಯಕ್ಕೆ ಒಳಗಾಗಿರುವುದು ಮಾತ್ರ ಅತ್ಯಾಶ್ಚರಕರ. ಕೋಲ ಶಾಂತಯ್ಯ ಬಸವಣ್ಣನ ಬಗ್ಗೆ ಹೇಳುತ್ತಲೇ ತನ್ನ ವಿಚಾರವನ್ನೂ ಪ್ರಸ್ತಾಪಿಸು ತ್ತಾನೆ. ಇವನು ಬಸವಣ್ಣನನ್ನು ತನ್ನ ಮಾರ್ಗದರ್ಶಿ ಎಂದು ನಂಬಿರಲೂ ಬಹುದೇನೋ! ಇದಿಷ್ಟೇ ಅಲ್ಲದೆ ತನ್ನ ಬದುಕನ್ನು ಅರ್ಥಗರ್ಭಿಸಿದವರನ್ನು ಕೂಡ ಆತ ನೆನೆಯುತ್ತಾನೆ. ಹೀಗೆ ನೆನೆಯು ವುದರ ಮೂಲಕವೇ ವಚನ ಚಳವಳಿಯ ಸಂದರ್ಭದೊಳಗೆ ಸಾಮೂಹಿಕ ಸಹಕಾರತ್ವದ ವೈಶಿಷ್ಟತೆಯನ್ನು ಎತ್ತಿಹಿಡಿಯುತ್ತಾನೆ.

***"ಎನಗುಣಲಿಕ್ಕಿದರಯ್ಯ ಸಿರಿಯಾಳ ಚೆಂಗಳೆಯರು***

***ಎನಗುಡ ಕೊಟ್ಟರಯ್ಯಾ ದಾಸ ದುಗ್ಗಳೆಯರು***

***ಎನ್ನ ಮುದ್ದಾಡಿಸಿದರಯ್ಯಾ ಅಕ್ಕನಾಗಮ್ಮನವರು***

***ಎನ್ನ ಸಲಹಿದರಯ್ಯಾ ಅಮ್ಮವ್ವ ಕೊಡಗೂಸು***

***ಚೋಳಿಯಕ್ಕೆ ನಂಬದ್ದೆ ನೀಲಮ್ಮ ಮಹಾದೇವಿ ಮುಕ್ತಾಯಕ್ಕಗಳು***

***ಇಂತಿವರ ಒಕ್ಕುಮಿಕ್ಕ ತಾಂಬೂಲ ಪ್ರಸಾದವಕೊಂಡು ಬದುಕಿದೆನಯ್ಯಾ***

***ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ"***

ಹೀಗೆ ತನ್ನ ಕಾಲದ ವಚನಕಾರರನ್ನು ನೆನಪಿಸಿಕೊಳ್ಳುವುದರ ಮೂಲಕ ವಚನ ಚಳವಳಿಯ ಒಗ್ಗಟ್ಟಿನ ನೆಲೆಗಳನ್ನು ಅನಾವರಣಗೊಳಿಸುತ್ತಲೇ ತನಗೆ ಸಹಾಯ ಮಾಡಿದ ಎಲ್ಲರನ್ನೂ ಕೋಲ ಶಾಂತಯ್ಯ ಸ್ಮರಿಸಿದ್ದಾನೆ. ಷಟ್‌ಸ್ಥಲ ಸಿದ್ಧಾಂತವನ್ನು ತನ್ನ ವಚನಗಳ ಮೂಲಕ ಅಭಿವ್ಯಕ್ತಪಡಿಸಿರುವ ಶಾಂತಯ್ಯ ಒಂದು ರೀತಿಯಲ್ಲಿ ಷಟ್‌ಸ್ಥಲ ಪ್ರತಿಪಾದಕನಂತೆ ಕಂಡುಬರುತ್ತಾನೆ. ಇದರ ಜೊತೆಗೆ ಹಲವಾರು ಬೆಡಗಿನ ವಚನಗಳನ್ನು ಈತ ರಚಿಸಿದ್ದಾನೆ. ಈ ಎಲ್ಲ ವಚನಗಳಲ್ಲಿ ಈತ ಗುರುಶಿಷ್ಯ ಸಂಬಂಧದ ಬಗ್ಗೆ, ಗುರುವಿನ ದೀಕ್ಷೆಯ ಬಗ್ಗೆ, ವೀರಶೈವ ಗುರು ಮತ್ತು ಶೈವ ಗುರುವಿನ ಸಂಬಂಧದ ಬಗ್ಗೆ, ಶರಣರ ನಡೆನುಡಿಯ ಬಗ್ಗೆ, ದೇಹ, ಮನಸ್ಸು, ಕಾಮ ಇವುಗಳ ಸಂಬಂಧದ ಬಗ್ಗೆ, ಸಂಸಾರ ವಿಷಯದ ಬಗ್ಗೆ, ಅಂತರಂಗಶುದ್ಧಿ, ನಿಷ್ಠೆ, ಪ್ರಾಮಾಣಿಕತೆಯ ಬಗ್ಗೆ, ಬದುಕಿನ ಸತ್ಯದ ಬಗ್ಗೆ ಇನ್ನೂ ಮುಂತಾದವುಗಳ ಬಗ್ಗೆ ಮಾತನಾಡಿರುವುದು ವಿಶೇಷವಾಗಿದೆ.

"ಸದ್ಗುರು ಮೂರ್ತಿಯ ಇರವು ಕರ್ಪುರವ ತಾಳಿರ್ದ

***ಕರಡದಂತಿರಬೇಕು***

***ದರ್ಪಣದೊಳಗಣ ಪ್ರತಿಬಿಂಬದಂತಿರಬೇಕು***

***ಕಮಲಪತ್ರದ ಬೆಂಬಳಿಯ ಅಂಟುವಿನಂತಿರಬೇಕು***

***ಪುಡಿ ಸಂಗದ ಸಂಚಾರದ ಸಂಗದಂತಿರಬೇಕು***

***ಕುಡಿವೆಳಗಿನ ಬುಡದ ಬೆಳಗಿನಂತಿರಬೇಕು"***

ಈ ರೀತಿಯಲ್ಲಿ ಗುರುವಿನ ಕಾರುಣ್ಯದ ನೆಲೆಗಳನ್ನು ಶೋಧಿಸುವ ಕೋಲ ಶಾಂತಯ್ಯ ಸದ್ಗತಿ ತೋರುವ ಗುರು ಹೇಗಿರಬೇಕೆಂಬುದನ್ನೂ ಕೂಡ ನಿರೂಪಿಸಿದ್ದಾನೆ. ಗುರು, ಲಿಂಗ, ಜಂಗಮದ ಬಗ್ಗೆ ಖಚಿತ ನಿಲುವನ್ನು ತಾಳುವ ಈತ ಶಿಪಪಥದ ಹಾದಿಯನ್ನು ಗುರು ತಿಳಿದಿರಬೇಕೆಂಬ ನಿಲುವಿಗೆ ಬರುತ್ತಾನೆ. ಈ ಹಿನ್ನೆಲೆಯಲ್ಲಿ ಹತ್ತಾರು ವಚನಗಳನ್ನು ರಚಿಸಿರುವ ಶಾಂತಯ್ಯ ಗುರುವಾದವನಿಗೆ ರಾಜಸ ತಾಮಸ ಗುಣಗಳಿರಬಾರದೆಂಬ ಎಚ್ಚರವನ್ನೂ ನೀಡುತ್ತಾನೆ. ಲೇಖಕ ರಾದ ತಿಪ್ಪೇಸ್ವಾಮಿ ಅವರು ಕೋಲ ಶಾಂತಯ್ಯನ ಇಂತಹ ಹತ್ತಾರು ವಚನಗಳ ಬಗ್ಗೆ ಸಮಗ್ರ ವಿಶ್ಲೇಷಣೆಯನ್ನೇ ನಡೆಸಿದ್ದಾರೆ. ಇದರಿಂದಾಗಿ ಈತನ ವಚನಗಳ ಒಳಗಿನ ಸಾಹಿತ್ಯಕ ನೆಲೆ, ಸಾಮಾಜಿಕ ನೆಲೆ, ಧಾರ್ಮಿಕ ನೆಲೆ ಮುಂತಾದವುಗಳ ಸ್ಪಷ್ಟ ಚಿತ್ರಣ ಓದುಗರ ಮನದಲ್ಲಿ ಅಷ್ಟೊತ್ತಿ ನಿಲ್ಲುತ್ತದೆ.

ಲೇಖಕರು ಕೋಲಶಾಂತಯ್ಯನ ವಚನಗಳೊಳಗಿನ ಉಪಮೆ, ರೂಪಕ, ವಿಶೇಷ ಮಾತು ಗಾರಿಕೆ, ನುಡಿಗಟ್ಟು ಮುಂತಾದವುಗಳನ್ನು ಸೂಕ್ಷ್ಮವಾಗಿ ಅವಲೋಕಿಸುವುದರ ಮೂಲಕ ಆತನ ಸಾಹಿತ್ಯಕ ಮೌಲ್ಯ ವನ್ನು ಅರ್ಥಪೂರ್ಣವಾಗಿ ಹಿಡಿದಿಟ್ಟಿದ್ದಾರೆ. ಇದಕ್ಕೆ ನಿದರ್ಶನವೆಂಬಂತೆ 'ಬಿಸಿಲ ಮುಂದಣ ಮಂಜಿ ನಂತಾಯಿತು' ಎನ್ನುವ ವಚನದ ತಾತ್ಪರ್ಯವನ್ನು ಬರೆಯುತ್ತಾ "ಬಿಸಿಲು, ದಿಟ, ಪುಣ್ಯ, ಯೋಗಿ, ಧೀರ, ಉರಗ, ಹರಿ, ವಿವೇಕಿ ಇವು ಪ್ರಬಲ ಹಾಗೂ ಉದಾತ್ತವಾದಂಥವು. ಇವುಗಳಿಗೆ ಅಭಿಮುಖವಾಗಿರುವ ಮಂಜು, ಸಟೆ, ಪಾಪ, ಸಂಸಾರ, ಹೇಡಿ, ಭೇಕ (ಕಪ್ಪೆ), ಕರಿ (ಆನೆ), ದುಃಖ ಇವೆಲ್ಲ ಸಮರ್ಥವಾಗಿ ಮುಖಾಮುಖಿಯಾಗಲಾರವು. ಅವುಗಳಷ್ಟು ಪ್ರಬಲವೂ ಅಲ್ಲ ಉದಾತ್ತವೂ ಅಲ್ಲ. ಇವೆರಡು ನಮ್ಮ ಬದುಕಿನ ವೈರುಧ್ಯಗಳು. ಇವುಗಳ ಮೂಲಕ ಕೋಲ ಶಾಂತಯ್ಯ ಬದುಕಿನ ಸತ್ಯವನ್ನು ಹೇಳತೊಡ ಗುತ್ತಾನೆ." ಎಂದು ವಿಶ್ಲೇಷಿಸುವುದರ ಮೂಲಕ ಆತನ ಸಾಹಿತ್ಯದ ಗಟ್ಟಿತನವನ್ನು ಹೆಕ್ಕಿ ತೋರಿಸಿದ್ದಾರೆ.

ಹಾಗೆಯೇ ಸಾಮಾಜಿಕ ನೆಲೆಯನ್ನು ಕುರಿತು ಕೋಲಶಾಂತಯ್ಯನ ಅಭಿಪ್ರಾಯ ಯಾವು ದಿತ್ತು ಎಂಬುದನ್ನೂ ಕೂಡ ಲೇಖಕರು ವಚನಗಳ ವಿಶ್ಲೇಷಣೆಯ ಮೂಲಕವೇ ನಿರೂಪಿಸಿದ್ದಾರೆ. ಅರಿವಿ ನೊಲುಮೆಯ ಮೂಲಕ ಮನಸ್ಸಿನ ಕೊಳಕನ್ನು ತೆಗೆಯುವ ಬಗೆ, ಶರಣರ ಸಂಗದಿಂದ ಮೂಡುವ ಅರಿವು, ಸುಖ ದುಃಖಗಳನ್ನು ಸಮನಾಗಿ ಸ್ವೀಕರಿಸುವ ಅನಿವಾರ್ಯತೆ, ಅಂತರಂಗ ಶುದ್ಧಿ ಮತ್ತು ಬಹಿರಂಗದ ಕಾರ ಇವುಗಳ ನಡುವಿನ ಸಂಬಂಧ, ಭಕ್ತನಾದವನು ಭಾವಶುದ್ಧ ನಾಗಿರಬೇಕಾದ ಅಗತ್ಯತೆ ಮುಂತಾದವುಗಳ ಮೂಲಕ ಕೋಲಶಾಂತಯ್ಯ ಮನುಷ್ಯ ಸಮಾಜ ಜೀವಿಯಾದ ಮೇಲೆ ಹೇಗೆ ಬದುಕಬೇಕೆಂಬುದನ್ನು ತನ್ನ ವಚನಗಳ ಮೂಲಕ ಅರ್ಥಪೂರ್ಣವಾಗಿ ನಿರೂಪಿಸಿದ್ದಾನೆ. ಉದಾ ಹರಣೆಗೆ 'ವ್ರತ ನೇಮವ ತೋರಿ, ಗದಕದಲ್ಲಿ ಮಾಡುವ ಭಕ್ತಿ, ಪಶುವ ಕೊಂದು ಹಸಿಯ ಭಕ್ಷಿಸುವವನ ದೆಸೆ ಲೇಸು' ಎಂವ ವಚನವಿದೆ. ಇದರ ಮೂಲಕ ಸಮಾಜ ದಲ್ಲಿನ ಹುಸಿ ಭಕ್ತಿ ಮತ್ತು ಭಕ್ತರನ್ನು ತನ್ನ ವಿಡಂಬನೆಯ ಮಾತುಗಳ ಮೂಲಕ ಚುಚ್ಚುವುದರ ಮೂಲಕ ಎಚ್ಚರಿಸಿದ್ದಾನೆ. ಈ ಹಿನ್ನೆಲೆಯ ಹಲವು ವಚನಗಳನ್ನು ಲೇಖಕರು ಅತ್ಯುತ್ತಮವಾಗಿ ವಿಶ್ಲೇಷಿಸುವ ಮೂಲಕ ಕೋಲ ಶಾಂತಯ್ಯನ ಸಾಮಾಜಿಕ ನೆಲೆಯ ಸೂಕ್ಷ್ಮತೆಯನ್ನು ನಿಖರವಾಗಿ ಹಿಡಿದಿಟ್ಟಿದ್ದಾರೆ.

ವಚನಗಳಲ್ಲಿ ಅಂಧ ಆಚರಣೆಗಳ ವಿರುದ್ಧ ಧ್ವನಿ ಹೊರಬಿದ್ದಂತೆ ಶರಣ ಧರ್ಮದ ನಡೆ ನುಡಿಯ ಬಗ್ಗೆಯೂ ಅಷ್ಟೇ ತೀವ್ರತರವಾದ ಧ್ವನಿ ಹೊರಬಿದ್ದಿದೆ. ಇದರಿಂದಾಗಿಯೇ ಗುರು, ಲಿಂಗ, ಜಂಗಮ, ಪ್ರಸಾದ, ಪಾದೋದಕ ಮುಂತಾದವುಗಳ ಬಗ್ಗೆ ವಚನ ಸಾಹಿತ್ಯ ಹೆಚ್ಚು ಮಾತ ನಾಡುತ್ತದೆ, ವಿಮರ್ಶಿಸುತ್ತದೆ ಮತ್ತು ಅರ್ಥೈಸುತ್ತದೆ. ಇದು ಕೋಲಶಾಂತಯ್ಯನ ವಚನಗಳಲ್ಲೂ ಎದ್ದು ಕಾಣುತ್ತದೆ. 'ಅರ್ತಿಗಾರಿಕೆಯಲ್ಲಿ ಕೆಲಬರು ಮೆಚ್ಚಬೇಕೆಂದು ಮಾಡುವನ ಭಕ್ತಿ, ಮಂಡೆಯ ಮೇಲೆ ಹೊತ್ತ ಸುರೆಯ ಲಚ್ಚಣಿಯಂತೆ, ಅದು ನಿಶ್ಚಯವಲ್ಲ.' ಎಂದು ಹೇಳುವ ಕೋಲಶಾಂತಯ್ಯ ಶರಣ ಧರ್ಮದ ಒಳಅರಿವುಗಳನ್ನು ಸೂಕ್ಷ್ಮವಾಗಿ ಹಿಡಿದಿಟ್ಟಿದ್ದಾನೆ. ಇವನ ಹೆಚ್ಚು ಧರ್ಮ ಕೇಂದ್ರ ವಚನಗಳು 'ನಿನ್ನ ನೀನರಿ' ಎನ್ನುವ ನೆಲೆಗಟ್ಟಿನಲ್ಲಿ ಹೆಚ್ಚು ನಿರೂಪಿತಗೊಳ್ಳುತ್ತವೆ. ಒಳ ಅರಿವು ತೆರೆದುಕೊಳ್ಳದ ಹೊರತು ಹೊರಜಗತ್ತಿನ ನೆಲೆಗೆ ಅರ್ಥವಿಲ್ಲ ಎಂಬುದು

ಅವನ ಮರ್ಮವಾಗಿರ ಬಹುದು. ಇಂತಹ ಧರ್ಮ ಕೇಂದ್ರಿತ ನೆಲೆಯ ಕೋಲಶಾಂತಯ್ಯನ ವಚನಗಳಲ್ಲಿನ ಸೂಕ್ಷ್ಮತೆಯಷ್ಟೇ ಸೂಕ್ಷ್ಮವಾಗಿ ಲೇಖಕರು ಅವನ ವಚನಗಳನ್ನು ವಿಶ್ಲೇಷಿರುವುದು ಶ್ಲಾಘನೀಯವಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಅಲಕ್ಷಿತ ನೆಲೆಯ ಅಂಚಿನಲ್ಲಿರುವ ಕೋಲಶಾಂತಯ್ಯನ ಜೀವನ ವಿವರ, ಅವನ ವಚನಗಳ ವಿಶ್ಲೇಷಣೆ, ಅವುಗಳ ಒಳಗಿರುವ ವಿವಿಧ ಆಯಾಮಗಳ ಕುರಿತ ಚರ್ಚೆ ಮುಂತಾದವುಗಳ ಮೂಲಕ ತಿಪ್ಪೇಸ್ವಾಮಿಯವರು ಅಲಕ್ಷಿತ ನೆಲೆಯಿಂದ ಲಕ್ಷ್ಮದ ಕಡೆ ಶಾಂತಯ್ಯ ನನ್ನು ತಂದಿರಿಸಿದ್ದಾರೆ. ಈ ಮೂಲಕ ವಚನ ಚಳವಳಿಯೊಂದು ಸಾಮೂಹಿಕ ಪ್ರಯತ್ನದ ಹೋರಾಟದ ಕೇಂದ್ರಬಿಂದು ಎಂಬುದನ್ನು ನೆನಪಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಚಿತ್ತಯ್ಯ ಪೂಜಾರ್, ಡಿ.ಕೆ. (2016). *ಸಾಂಸ್ಕೃತಿಕ ಸಂಕಥನ.* ರಚನಾ ಪ್ರಕಾಶನ.
- ಹಳಮನೆ ಲಿಂಗದೇವರು. (2010). *ಸಂಸ್ಕೃತಿ ಶೋಧ,* ವಿಸ್ಮಯ ಪ್ರಕಾಶನ.
- ಸಬರದ ಬಸವರಾಜ (2002). *ಇಪ್ಪತ್ತನೆಯ ಶತಮಾಣದ ಕನ್ನಡ ಸಾಹಿತ್ಯದ ಘಟ್ಟಗಳು.* ಕರ್ನಾಟಕ ವಿದ್ಯಾವರ್ಧಕ ಸಂಘ.
- ತಿಪ್ಪೇಸ್ವಾಮಿ, ಜಿ.ಆರ್. (2005). *ಕೋಲಶಾಂತಯ್ಯ.* ಬಸವ ಅಧ್ಯಯನ ಪೀಠ, ಮೈಸೂರು ವಿಶವವಿದ್ಯಾಲಯ.
- ತಿಪ್ಪೇಸ್ವಾಮಿ, ಜಿ.ಆರ್. (2014). *ಕೊಟ್ಟ ಕುದರೆ.* ಸಿ.ವಿ.ಜಿ. ಪ್ರಕಾಶನ.